## ನಿಮ್ಮೊಡನೆ

# ಮಕ್ಕಳು ಮತ್ತು ಶಿಸ್ತು

ಅಡ್ಡದಾರಿ ಹಿಡಿಯುವ ಅಥವಾ ದಾರಿ ತಪ್ಪುವ ಮಕ್ಕಳನ್ನು ಸೂಕ್ಷ್ಮವಾಗಿ ನಿರ್ವಹಿಸ ಬೇಕಾದಂತಹ ಜಟಿಲ ಸಾಮಾಜಿಕ ವ್ಯವಸ್ಥೆ ಇಂದು ನಮ್ಮದಾಗಿದೆ ಎಂಬ ವಾಸ್ತವವನ್ನು ನಾವು ಮರೆಯಲಾಗದು.

‘ಬೆಣ್ಣೆ ಕಳ್ಳ’ ಕೃಷ್ಣನ ಕಥೆ ಯಾರಿಗೆ ತಾನೇ ಗೊತ್ತಿಲ್ಲ? ಬಾಲ್ಯದ ತುಂಟಾಟಗಳ ಸಂಕೇತವೇ ಎನಿಸಿಬಿಡಬಹುದಾದ ಕೃಷ್ಣನ ರಂಜನೀಯ ಕಥೆಗಳು ನಮ್ಮ ಪುರಾಣಗಳಲ್ಲಿ ಹಾಸುಹೊಕ್ಕಾಗಿವೆ. ಇಂತಹ ಕೃಷ್ಣನನ್ನು ಹೆಡೆಮುರಿ ಕಟ್ಟಿ ಶಿಸ್ತಿಗೊಳಪಡಿಸುವ ತಾಯಿ ಯಶೋದೆಯ ಕಥೆಯೂ ನಮಗೆ ಗೊತ್ತು. ‘ಗುಮ್ಮನ ಕರೆಯದಿರೆ ಅಮ್ಮ ನೀನು ಸುಮ್ಮನೆ ಇದ್ದೇನು, ಅಮ್ಮಿಯ ಬೇಡೆನು ಮಮ್ಮು ಉಣ್ಣುತೇನೆ ಅಮ್ಮ ಅಳುವುದಿಲ್ಲ’ ಎಂದು ಪುರಂದರದಾಸರ ಪದದಲ್ಲಿ ಅಮ್ಮನನ್ನು ಗೋಗರೆಯುವ ಕೃಷ್ಣ, ಶಿಸ್ತಿಗೊಳಪಡುವ ಬಾಲಕನಾಗಿ ನಮಗೆ ಕಾಣುತ್ತಾನೆ. ಹಾಗೆಯೇ ‘ಗುಮ್ಮನೆಲ್ಲಿಹ ತೋರಮ್ಮ, ಸುಮ್ಮನಂಜಿಸಬೇಡಮ್ಮ’ ಎಂಬಂತಹ ಕೃಷ್ಣನ ಪ್ರಶ್ನೆ ಬಾಲ್ಯದ ಅದಮ್ಯ ಕುತೂಹಲಗಳನ್ನೂ ಧ್ವನಿಸುತ್ತದೆ ಎಂಬುದನ್ನು ನಾವು ಮರೆಯಲಾಗದು. ಆದರೆ ಈಗಿನ ಕಾಲದ ಮಕ್ಕಳ ‘ಕುತೂಹಲ’ಗಳು ಸಂಕೀರ್ಣವಾಗಿವೆ.

‘ಹೆಣ್ಣುಗಳಿರುವಲ್ಲಿ ಪೋಗಿ/ ಅವರ ಕಣ್ಣು ಮುಚ್ಚುವುದಿಲ್ಲವೆ/
ಚಿಣ್ಣರ ಬಡಿಯೆನು ಅಣ್ಣನ ಬೈಯೆನು/ ಬೆಣ್ಣೆಯ ಬೇಡೆನು ಮಣ್ಣು ತಿನ್ನುವುದಿಲ್ಲ;

ಬಾವಿಗೆ ಪೋಗೆ ಕಾಣೆ ಅಮ್ಮ ನಾನು/ ಹಾವಿನೊಳಾಡೆ ಕಾಣೆ/
ಆವಿನ ಮೊಲೆಯೂಡೆ ಕರುಗಳ ಬಿಡೆ ನೋಡೆ/ ದೇವರಂತೆ ಒಂದು ಠಾವಿಲಿ ಕೂಡುವೆ

ಎಂದು ‘ಮುದ್ದುಕೃಷ್ಣ’ ಹೇಳುವಷ್ಟು ಮಟ್ಟಿಗೆ ಬದುಕು ಸರಳವಾಗಿಲ್ಲ. ಹಾಗೆಯೇ ಮಕ್ಕಳನ್ನು ನಿಯಂತ್ರಿಸುವ ವಿಚಾರವೂ ‘ಆಧುನಿಕ ಯಶೋದೆ’ಯರಿಗೆ ಅಷ್ಟೇ ಸವಾಲಿನದಾಗಿದೆ. ‘ಪೇರೆಂಟಿಂಗ್’ ಎನ್ನುವುದು ಸಂತಸದ ಜೊತೆ ಜೊತೆಗೇ ಹಲವು ಬಗೆಯ ಸವಾಲುಗಳನ್ನೂ ಹೊತ್ತು ತರುತ್ತಿರುವುದು ಆಧುನಿಕ ಸಮಾಜದ ಲಕ್ಷಣವಾಗಿದೆ. ಮಕ್ಕಳಲ್ಲಿ ಶಿಸ್ತು ಮೂಡಿಸಲು ಶಿಕ್ಷೆಗೊಳಪಡಿಸುವ ವಿಚಾರಗಳು ಸೂಕ್ಷ್ಮವಾಗುತ್ತಿವೆ. ಚಡ್ಡಿಯಲ್ಲಿ ಮೂತ್ರ ಮಾಡಿಕೊಳ್ಳುತ್ತಿದ್ದ ಏಳು ವರ್ಷದ ಮಗುವನ್ನು ಶಿಸ್ತಿಗೊಳಪಡಿಸಲು ಮಗುವನ್ನು ಬೆದರಿಸಿದ್ದಕ್ಕಾಗಿ ಭಾರತೀಯ ದಂಪತಿ ನಾರ್ವೆಯಲ್ಲಿ ಬಂಧನಕ್ಕೊಳಗಾದ ಘಟನೆ ನೆನಪಿಸಿಕೊಳ್ಳಬಹುದು.

ಬೇರೆ ದೇಶಗಳಲ್ಲಿನ ಕಾನೂನುಗಳು ನಮಗೆ ಅನ್ವಯವಾಗುವುದಿಲ್ಲ ಸರಿ. ಆದರೆ ಜಾಗತೀಕರಣದ ನಂತರ ಕುಟುಂಬವೂ ಸೇರಿದಂತೆ ಸಾಮಾಜಿಕ ವ್ಯವಸ್ಥೆಗಳು ಪುನರ್‌ವ್ಯಾಖ್ಯಾನಗಳಿಗೆ ಒಳಪಡುತ್ತಿವೆ ಎಂಬುದನ್ನು ನಾವು ಮರೆಯಲಾಗದು. ಜಗತ್ತೇ ಹಳ್ಳಿಯಾಗಿರುವ ಇಂದಿನ ಯುಗದಲ್ಲಿ ಹಲವು ತೆರನಾದ ಪ್ರಭಾವಗಳಿಗೆ ಮಕ್ಕಳು ತೆರೆದುಕೊಳ್ಳುತ್ತಿದ್ದಾರೆ. ತಂತ್ರಜ್ಞಾನಗಳು ಹಾಗೂ ಮಾಧ್ಯಮಗಳ ಪ್ರಭಾವ ದಿನನಿತ್ಯದ ಬದುಕನ್ನು ಆವರಿಸಿಕೊಳ್ಳುತ್ತಿದೆ. ತಾಯಿ ತಂದೆ ಇಬ್ಬರೂ ದುಡಿಯಬೇಕಾದ ಅನಿವಾರ್ಯತೆಗಳು ಸೃಷ್ಟಿಯಾಗುತ್ತಿರುವ ಈ ಕಾಲದಲ್ಲಿ ಮಕ್ಕಳಿಗೆ ಪೂರ್ಣಪ್ರಮಾಣದ ಗಮನ ನೀಡಲು ಸಾಧ್ಯವಾಗದಷ್ಟು ಕುಟುಂಬ ವ್ಯವಸ್ಥೆಯಲ್ಲೂ ಬದಲಾವಣೆಗಳಾಗುತ್ತಿವೆ. ಕುಟುಂಬಗಳ ಅರಿವಿಗೂ ಬಾರದಂತೆ ಹಲವು ಬಗೆಯ ಪ್ರಭಾವಗಳಿಗೆ ಮಕ್ಕಳು ಸಿಲುಕಿಕೊಳ್ಳ ಬಹುದಾದಂತಹ ಸೂಕ್ಷ್ಮ ವಾತಾವರಣ ಇಂದಿನದು.

ಅಷ್ಟೇ ಅಲ್ಲ, ಬಾಲ್ಯದ ಸವಿಯನ್ನೇ ಕಿತ್ತುಕೊಳ್ಳುವಷ್ಟರ ಮಟ್ಟಿಗೆ ಆಟಪಾಠಗಳ ಹೊರೆ ಇಂದಿನ ಮಕ್ಕಳನ್ನು ಆವರಿಸಿದೆ. ಸ್ಪರ್ಧಾ ಯುಗದ ಒತ್ತಡಗಳಲ್ಲಿ ಬಾಲ್ಯದ ಬದುಕು ನಲುಗಿರುವುದನ್ನು ನಾವು ಅಲ್ಲಗಳೆಯಲಾಗದು. ಆಧುನಿಕ ಯುಗದ ನಾನಾ ಆಕರ್ಷಣೆಗಳು, ದುಶ್ಚಟಗಳ ಜಾಲಗಳು, ಸಮವಯಸ್ಕರ ಒತ್ತಡಗಳು ಮುಂತಾದ ಸವಾಲುಗಳನ್ನು ನಿರ್ವಹಿಸುವ ಸಮಸ್ಯೆ ಮಕ್ಕಳಿಗೂ ಇದೆ. ಈ ಬಗ್ಗೆ ಸರಿ ತಪ್ಪುಗಳ ಕುರಿತು ವಿಶ್ಲೇಷಿಸಿ ಮಕ್ಕಳಿಗೆ ಮನವರಿಕೆ ಮಾಡಿಕೊಡುವ ಹೊಣೆಗಾರಿಕೆ ತಂದೆ ತಾಯಿಗಳು, ಶಿಕ್ಷಕರು ಹಾಗೂ ಒಟ್ಟು ಸಮಾಜದ ಮೇಲೂ ಇದೆ. ಹೀಗಾಗಿ, ಕಳೆದ ವರ್ಷ ಸಾಕಷ್ಟು ಪ್ರಚಾರ ಪಡೆದ, ಶಾಲಾ ಸಮವಸ್ತ್ರದಲ್ಲಿ ಹುಕ್ಕಾಬಾರ್‌ಗೆ ತೆರಳಿದ್ದ ಮಕ್ಕಳ ಪ್ರಸಂಗವನ್ನೇ ಗಮನಿಸ ಬಹುದು. ಈ ಪ್ರಸಂಗದಲ್ಲಿ ಮಕ್ಕಳನ್ನು ನಿರ್ಬಂಧಿಸುವಂತಹ ಹೊಣೆಗಾರಿಕೆಯನ್ನು ಹುಕ್ಕಾ ಬಾರ್ ಮಾಲೀಕರು ಪ್ರದರ್ಶಿಸಬಹುದಿತ್ತಲ್ಲವೆ? ಎಂಬ ಪ್ರಶ್ನೆ ಮೂಡುತ್ತದೆ. ಏಕೆಂದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ತಂಬಾಕು ಮಾರಾಟ ಮಾಡುವಂತಿಲ್ಲ ಎಂದು ಕಾನೂನೇ ಇದೆ.

ಅಡ್ಡದಾರಿ ಹಿಡಿಯುವ ಅಥವಾ ದಾರಿ ತಪ್ಪುವ ಮಕ್ಕಳನ್ನು ಸೂಕ್ಷ್ಮವಾಗಿ ನಿರ್ವಹಿಸ ಬೇಕಾದಂತಹ ಜಟಿಲ ಸಾಮಾಜಿಕ ವ್ಯವಸ್ಥೆ ಇಂದು ನಮ್ಮದಾಗಿದೆ ಎಂಬ ವಾಸ್ತವವನ್ನು ನಾವು ಮರೆಯಲಾಗದು. ಹೀಗಾಗಿ, ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸುವ ವಿಚಾರದಲ್ಲಿ ಇಂದಿನ ತಂದೆತಾಯಿಗೆ ಹೆಚ್ಚಿನ ತಾಳ್ಮೆ, ಸೂಕ್ಷ್ಮತೆ, ಸಂವೇದನಾಶೀಲತೆ ಹಾಗೂ ಸಾಮಾಜಿಕ ಅರಿವೂ ಇರುವುದು ಅವಶ್ಯ.

ಶಿಸ್ತಿನ ವಿಚಾರ ಒಂದೊಂದು ಸಂದರ್ಭದಲ್ಲಿ ಒಂದೊಂದು ಬಗೆಯದಾಗಿರುತ್ತದೆ. ಶಿಸ್ತು ಎನ್ನುವುದು ಬದುಕಿನ ತತ್ವ; ಬದುಕಿನ ರೀತಿ ನೀತಿ ಎಂಬುದನ್ನು ಮಕ್ಕಳ ಪ್ರಜ್ಞೆಯೊಳಗೆ ಇಳಿಸಲು ನಮ್ಮ – ನಿಮ್ಮ ಹೊಣೆಯೂ ಹೆಚ್ಚಿನದಾಗಿದೆ.

■ ಸಿ.ಜಿ.ಮಂಜುಳಾ



ಈಶ್ವರ್